# SINDHI HIGH SCHOOL, HEBBAL

**PERIODIC TEST III [2025-26]**

**SUBJECT: L2 KANNADA**

**Class: VIII** — **Max. Marks: 30**

**Date: 06.02.2026** — **Reading time: 8:25 am to 8:35 am**

**No. of sides: 2** — **Writing Time: 8:35 am to 9:35 am**

---

**ಸೂಚನೆಗಳು:**

- ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 6 ಮುಖ್ಯ ಪ್ರಶ್ನೆಗಳಿರುತ್ತವೆ.
- ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.
- ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

---

**I. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(5x1=5)**

ಪಶ್ಚಿಮ ಘಟ್ಟದ ಕುದುರೆಮುಖ ದೇಶದ ಅತ್ಯಂತ ಪ್ರತಿಷ್ಠಿತ ಕಬ್ಬಿಣದ ಸಂಪನ್ಮೂಲಗಳಲ್ಲೊಂದು. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಗಡಿಯಲ್ಲಿರುವ ಕುದುರೆಮುಖ, ಗಂಗಾಮೂಲ, ಗಂಗ್ರೀಕಲ್ ಇವೆಲ್ಲವೂ ಎತ್ತರದ ಪರ್ವತ ಶಿಖರಗಳಾಗಿವೆ. ಈ ಭಾಗದಲ್ಲಿ ಸುಮಾರು ೫೦ ಕಿ. ಮೀ. ಉದ್ದಕ್ಕೂ ವಿಸ್ತರಿಸಿರುವ ಮ್ಯಾಗ್ನೆಟೈಟ್ (Magnetite) ಅದಿರು ೧೨೦- ೨೦೦ ಮೀಟರ್ ದಪ್ಪವಾಗಿದೆ. ಧಾರವಾಡದ ಅದಿರು ಕೇಂದ್ರ ಇದಕ್ಕೇ ಸೇರಿದ್ದಾಗಿದೆ. ಕುದುರೆಮುಖ ನಿಕ್ಷೇಪವು ಸುಮಾರು ೨೯೦ ದಶಲಕ್ಷ ವರ್ಷಗಳ ಹಿಂದೆ ಜ್ವಾಲಾಮುಖಿ ಜನ್ಯ ಶಿಲೆಗಳೊಂದಿಗೆ ಪಟ್ಟಿರೂಪದ ಕಬ್ಬಿಣ ಶಿಲೆ ರೂಪುಗೊಂಡಿದೆ. ಇಲ್ಲಿ ಮ್ಯಾಗ್ನಾಟೈಟ್ ನ ಬೆಣಚು ಅದಿರು ಕಂಡುಬಂದಿದೆ. ಕಬ್ಬಿಣ-ಸಿಲಿಕಾ ಈ ಎರಡಕ್ಕೂ ಜ್ವಾಲಾಮುಖಿಗಳೇ ಮೂಲ. ಮಂಗಳೂರು ಬಂದರು ಕುದುರೆಮುಖ ನಿಕ್ಷೇಪಕ್ಕೆ ೧೦೦ ಕಿ.ಮೀ. ಅಂತರದಲ್ಲಿದೆ. ಇಲ್ಲಿನ ಅದಿರನ್ನು ಹೊರದೇಶಕ್ಕೆ ರಫ್ತು ಮಾಡಲು ತುಂಬಾ ಅನುಕೂಲಕರವಾಗಿದೆ. ಒಟ್ಟಾರೆ ಕುದುರೆಮುಖ ಅದಿರಿನ ಮೀಸಲು ಪ್ರಮಾಣ ೬೦೦ ದಶಲಕ್ಷ ಟನ್ ಗಳಾಗಿವೆ.

ಭಾರತ ಸರ್ಕಾರದ ಅಧೀನದಲ್ಲಿರುವ ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿ ಸಂಪೂರ್ಣ ಯಾಂತ್ರೀಕೃತ ಗಣಿಗಾರಿಕೆ ಕೇಂದ್ರವಾಗಿ ಬೆಳೆದಿದೆ. ವಾರ್ಷಿಕವಾಗಿ ೫ ರಿಂದ ೭ ದಶಲಕ್ಷ ಟನ್ ಅದಿರು ಉತ್ಪಾದನೆಯ ಗುರಿಯನ್ನು ಹೊಂದಿದೆ. ಇಡೀ ಏಷ್ಯಾದಲ್ಲಿ ಅತ್ಯಂತ ದೊಡ್ಡ ಕಬ್ಬಿಣದ ಅದಿರಿನ 'ಗಣಿ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಯೋಜನೆಯಲ್ಲಿ ಭಾರೀ ಪ್ರಮಾಣದ ಕಬ್ಬಿಣ ಉತ್ಪಾದನೆಯಾಗುತ್ತಿದೆ. ಈ ಗಣಿಗಾರಿಕೆಯಿಂದಾಗಿ ಇಲ್ಲಿ ಹರಿಯುವ ಭದ್ರಾ ನದಿಯು ಕಲುಷಿತಗೊಳ್ಳಲು ಪ್ರಾರಂಭವಾಯಿತು. ಆದ್ದರಿಂದ ಇದನ್ನು ನಿಯಂತ್ರಿಸಲು ಭದ್ರಾ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿ, ೭೦ ಲಕ್ಷ ಸಸಿಗಳನ್ನು ನೆಡಲಾಗಿದೆ.

ಕುದುರೆಮುಖ ಭಾರತದ ಮುಖ್ಯ ಕಬ್ಬಿಣದ ನಿಕ್ಷೇಪವಾಗಿದೆ. ಈ ಸಂಪನ್ಮೂಲವನ್ನು ಆಧರಿಸಿ ೨೭೦ ಕೋಟಿ ವೆಚ್ಚದಲ್ಲಿ ಮೂರು ದಶಲಕ್ಷ ಟನ್ ಕಬ್ಬಿಣದ ಅದಿರನ ಸ್ಥಾವರವೊಂದು ಮಂಗಳೂರಿನಲ್ಲಿ ಸ್ಥಾಪನೆಯಾಗಿದೆ. ಈಗ ಕುದುರೆಮುಖ ಕಬ್ಬಿಣದ ಅದಿರನ್ನು ಸಾರೀಕೃತ ರೂಪದಲ್ಲಿ ಇರಾಕ್ ದೇಶಕ್ಕೆ ರಫ್ತು ಮಾಡಲಾಗುತ್ತಿದೆ.

**ಪ್ರಶ್ನೆಗಳು:**

1. ಕುದುರೆಮುಖ ನಿಕ್ಷೇಪವಿರುವುದು ಚಿಕ್ಕಮಗಳೂರು ಜಿಲ್ಲೆಯ __________ ಗಡಿಯಲ್ಲಿ.
   A. ಪೂರ್ವ  B. ದಕ್ಷಿಣ  C. ಉತ್ತರ  D. ಪಶ್ಚಿಮ

2. ಕುದುರೆಮುಖ ಮಂಗಳೂರಿನ ಬಂದರಿನಿಂದ __________________ಅಂತರದಲ್ಲಿದೆ.
   A. ೧೦೦ ಕಿ.ಮೀ  B. ೬೦೦ ಕಿ.ಮೀ  C. ೭೦ ಕಿ.ಮೀ  D. ೨೦೦ ಕಿ.ಮೀ

3. ಏಷ್ಯಾಖಂಡದಲ್ಲೇ ಅತೀ ದೊಡ್ಡ ಕಬ್ಬಿಣದ ಅದಿರಿನ ಗಣಿಗಾರಿಕೆಯ ಕೇಂದ್ರವಿದು__________________
   A. ಬಾಬಾ ಬುಡನ್ ಗಿರಿ  B. ಕೆಮ್ಮಣ್ ಗುಂಡಿ  C. ಕುದುರೆಮುಖ  D. ಹೊಸಪೇಟೆ

4. ಕುದುರೆಮುಖ ಕಬ್ಬಿಣದ ಅದಿರನ್ನು ಸಾರೀಕೃತ ರೂಪದಲ್ಲಿ _________ದೇಶಕ್ಕೆ ರಫ್ತು ಮಾಡಲಾಗುತ್ತಿದೆ.
   A. ಇರಾನ್  B. ಇರಾಕ್  C. ಇಸ್ರೇಲ್  D. ಇಟಲಿ

5. ಕುದುರೆ ಮುಖ ಕಬ್ಬಿಣ ಅದಿರು ನಿಕ್ಷೇಪದಿಂದ _______ನದಿಯು ಕಲುಷಿತವಾಗಲು ಪ್ರಾರಂಭವಾಯಿತು.
   A. ಭದ್ರಾ  B. ಕಾವೇರಿ  C. ತುಂಗಾ  D. ಭೀಮಾ

**II. ಕೆಳಗೆ ನೀಡಲಾಗಿರುವ ವ್ಯಾಕರಣಾಂಶಗಳ ಬಹುಆಯ್ಕೆಯ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** **(5X1=5)**

1. 'ಖತಿ' - ಪದದ ಸಮಾನಾರ್ಥಕ ಪದ ________________
   A. ಕೋಪ B. ಯಾಗ C. ಭತ್ತ D. ಗರ್ವ

2. 'ಮತ್ಸರ'- ಈ ಪದದ ವಿರುದ್ಧಾರ್ಥಕ ಪದ_______________
   A. ಅನಮತ್ಸರ B. ಅಪಮತ್ಸರ C. ನಿರ್ಮತ್ಸರ D. ಸಮತ್ಸರ

3. 'ಮಳೆದೆಗೆದು' - ಪದವು ಕೆಳಗಿನ ಈ ಸಂಧಿಗೆ ಉದಾಹರಣೆಯಾಗಿದೆ.
   A. ಲೋಪ ಸಂಧಿ B. ಸವರ್ಣದೀರ್ಘ ಸಂಧಿ C. ಗುಣ ಸಂಧಿ D. ಆದೇಶ ಸಂಧಿ

4. 'ನಿತ್ಯ' -ಈ ಪದದ ತದ್ಭವ ರೂಪ: ________________________
   A. ದಿನ B. ಪ್ರತೀದಿನ C. ನಿಚ್ಚ D. ಸತ್ಯ

5. 'ವ್ರಿಹಿಗನು' ಈ ಪದದಲ್ಲಿನ ವಿಭಕ್ತಿಯನ್ನು ಗುರುತಿಸಿ.
   A. ಪ್ರಥಮಾ B. ತೃತೀಯಾ C. ಷಷ್ಠೀ D. ಸಪ್ತಮೀ

**III. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ:** **(3X1=3)**

1. 'ರೈತರು ಸುಗ್ಗಿ ಹಬ್ಬವನ್ನು ಆಚರಿಸುತ್ತಾರೆ.'- ಭೂತಕಾಲದಲ್ಲಿ ಬರೆಯಿರಿ.
2. 'ಅತಿ ಆಸೆ ಗತಿ ಕೇಡು'. – ಈ ಗಾದೆ ಮಾತಿನ ಒಳಾರ್ಥವನ್ನು ಬರೆಯಿರಿ.
3. 'ತೀರ್ಮಾನ' – ಈ ಪದವನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿರಿ.

**IV. ನಿಮ್ಮ ಬಡಾವಣೆಯ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ಬೆಸ್ಕಾಂ ಅಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.** **(1X4=4)**

**V. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(2X2=4)**

1. ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು?
2. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು?

**VI. ಕೆಳಗಿನ ಪ್ರಶ್ನೆಗಳಿಗೆ ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **(3X3=9)**

1. ಗೌತಮರು ನರೆದಲಗನೆ ಶ್ರೇಷ್ಠವೆನ್ನಲು ವ್ರಿಹಿಯು ಹೇಳಿದ್ದೇನು? ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?
2. ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳಾವುವು?
3. **ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

"ವಿಲಯಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳಾಧರಿಸಿ ಸಲಹುವೆ"

**ಅಥವಾ**

"ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು"

********************